# ಪ್ರಮಾಣಪತ್ರ

ಬಿ.ಎ 6ನೇ ಸೆಮಿಸ್ಟರ್ ಭೂಗೋಳಶಾಸ್ತ್ರದ ವಿದ್ಯಾರ್ಥಿಯಾದ ಕುಮಾರ ಶರಣಪ್ಪ ವಾಡಿವಾಳರ ' ನನ್ನ ಮೇಲ್ವಿಚಾರಣೇಯಲ್ಲಿ "ದಕ್ಷಿಣ ಕರ್ನಾಟಕದ ಪ್ರೇಕ್ಷಣಿಕ ಸ್ಥಳಗಳ ಬಗ್ಗೆ" ಕುರಿತು ಯೋಜನೆಯನ್ನು "ಭೂಗೋಳ ಶಾಸ್ತ್ರದ 6ನೇ ಸೆಮಿಸ್ಟರ್" 2022-23 ರಲ್ಲಿ ಯಶಸ್ವಿಯಾಗಿ ಪರಿಪೂರ್ಣಗೊಳಿಸಿದ್ದೆನೆ ಎಂದು ಈ ಮೂಲಕ ಪ್ರಾಮಾಣಿಕರಿಸುತ್ತೆನೆ.

ಸ್ಥಳ: ಹುಬ್ಬಳ್ಳಿ

ದಿನಾಂಕ: 10/08/2023

Shri D.S. Hegde

Head, Dept. Of Geography

Project Supervisor

External

10/08/23

Internal Examiner

10/8/2023.

PRINCIPAL

Scanned with Oken Scanner

# KARNATAKA UNIVERISTY, DHARWAD


Shri sharana nooliya chandayya

Dr B.R Amedkar smaraka

A.K.K Education soceity's Arts,Commerce collage ,

Gangadhar nagar Hubbali-580020


# DEPARTMENT OF GEOGRAPHY

B.A 6th SEMESTER PROJECT REPORT

# TOURISM SPOTS IN SOUTH CANARA


By 6th semester students

DEPARTMENT OF GEOGRAPHY

**Project supervisor**

Shri D.R Dattatraya Hegde


Submitted to

The department of geography B.A 6th SEM Examination

# YEAR 2023



Scanned with Oken Scanner

Shri. Sharana Nooliya Chandayya

Dr. B.R Ambedkar Smaraka

A.K.K. Education society's Arts & commerce college

Gangadhar nagar, hubballi-580020

## Department of Geography

## B.A 6th sem project work -2023

| SL.NO | NAME OF THE STUDENTS | SIGNATURE |
|---|---|---|
| 1 | Akasha H | [signature] |
| 2 | Chandrashekar C Rahod | [signature] |
| 3 | Hanumathappa Basappa | [signature] |
| 4 | Lkshadipati | [signature] |
| 5 | Manjunath Hanumanth | [signature] |
| 6 | Maruthi Gubbi patil | |
| 7 | Moulasab R | [signature] |
| 8 | Praksh Maheshappa | |
| 9 | Ravi Chavan | [signature] |
| 10 | Ravi kumar | [signature] |
| 11 | Santhosh S Rathod | |
| 12 | Sharanappa madivalar | [signature] |
| 13 | Veeresh | [signature] |
| 14 | Vekatesh | [signature] |
| 15 | Vijayanand A Mulagund | [signature] |



Scanned with Oken Scanner

# ಕೃತಜ್ಞತೆಗಳು

ಕರಾವಳಿಯ ಪ್ರದೇಶದ ಪ್ರವಾಸಿ ಸ್ಥಳಗಳ ಈ ಕ್ಷೇತ್ರ ಅಧ್ಯಯನ ಕಾರ್ಯದಲ್ಲಿ ಅನೇಕ ಸಿಬ್ಬಂದಿ ವರ್ಗಗಳು ಹಾಗೂ ವಿದ್ಯಾರ್ಥಿಗಳು ನೆರವಾಗಿದ್ದಾರೆ.

ಈ ಮಾಹಿತಿಯನ್ನು ಹೊರತರಲ್ಲಿಕ್ಕೆ ಮಾರ್ಗದರ್ಶನ ಮಾಡಿದ ನಮ್ಮ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ **ಪ್ರೋ. ದತಾತ್ರೇಯ ಹೆಗಡೆ.** ಭೂಗೋಳಶಾಸ್ತ್ರ ವಿಭಾಗ ಹಾಗೂ ಈ ಕ್ಷೇತ್ರ ಕಾರ್ಯ ಮಾಡಲು ಮಾರ್ಗದರ್ಶನ ನೀಡಿದ ಹಾಗೂ ಈ ಅದ್ಯಯನ ಕಾರ್ಯದಲ್ಲಿ ಸಾಕಷ್ಟು ಸಲಹೆ ಸೂಚನೆಗಳನ್ನು ನೀಡಿದ ಕರಾವಳಿಯ ಪ್ರದೇಶದ ಪ್ರವಾಸಿ ಸ್ಥಳಗಳು ಮಾಹಿತಿ ಕೇಂದ್ರದ ಅಧಿಕಾರಿಗಳಿಗೂ, ನಮ್ಮನ್ನೂ ಕಾರ್ಯ ಮಾಡಲೂ ಪ್ರೋತ್ಸಾಹಿಸಿದ ನಮ್ಮ ಮಹಾವಿದ್ಯಾನಿಲಯದ ಎಲ್ಲ ಉಪನ್ಯಾಸಕ ವರ್ಗಕ್ಕೆ ವಂದನೆಗಳು ಅಧ್ಯಯನ ಕಾರ್ಯ ಪೂರ್ಣಗೊಳ್ಳಲು ಸಹಕರಿಸಿದ ನಮ್ಮ ಆಡಳಿತ ಮಂಡಳಿಯ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಎಲ್ಲ ಸದಸ್ಯರಿಗೂ ಎಲ್ಲರಿಗೂ ವಂದನೆಗಳು.

Scanned with Oken Scanner

# ವಿಷಯನುಕ್ರಮಾಣಿ

## ಅಧ್ಯಾಯ - ಪರಿಚಯ


1. ಪ್ರವಾಸದ ಪ್ರಾಮುಖ್ಯತೆ
2. ಪ್ರಾವಸ ಕೈಗೊಳ್ಳಲು ಕಾರಣ ಹಾಗೂ ಉದ್ದೇಶ
3. ಅಧ್ಯಯನ ಕೇಂದ್ರಗಳಾಗಿ ಕರಾವಳಿ ತೀರದ ಪ್ರವಾಸಿ ಸ್ಥಳಗಳು

- ಜೋಗ
- ಮುರುಡೇಶ್ವರ
- ಹೊನ್ನಾವರ
- ಇಡುಗುಂಜಿ
- ಉಡುಪಿ
- ಧರ್ಮಸ್ಥಳ
- ಹೊರನಾಡು
- ಶ್ರೀಂಗೇರಿ

4. ಸಲಹೆಗಳು
5. ಆಧಾರ ಗ್ರಂಥಗಳು




Scanned with Oken Scanner

## 1. ಪ್ರವಾಸದ ಪ್ರಾಮುಖ್ಯತೆ :-

ಪ್ರವಾಸೋದ್ಯಮವು ಒಂದು ರಾಜ್ಯ ಅಥವಾ ರಾಷ್ಟ್ರದ ಪ್ರಮುಖವಾದ ಆರ್ಥಿಕ ಹಾಗೂ ಸಾಮಾಜಿಕ ಅಂಗ ಹೀಗಾಗಿ ಒಂದು ಪ್ರದೇಶದ ಪ್ರಾಮುಖ್ಯತೆ ಏನೆಂದರೆ ಪ್ರವಾಸದಿಂದ ಪ್ರಭಾವಿತಗೊಳ್ಳುವುದು. ಕರ್ನಾಟಕದ ಕರಾವಳಿ ಪ್ರದೇಶದ ಪ್ರಾಮುಖ್ಯತೆ ಏನೆಂದರೆ ಪ್ರಮುಖವಾಗಿ ಪಶ್ಚಿಮ ಘಟ್ಟದಲ್ಲಿರುವ ಅನೇಕ ಪ್ರೇಕ್ಷಣೀಯ ಸ್ಥಳಗಳಾಗಿದೆ ಎಂದು ತಿಳಿದು ಬರುತ್ತದೆ. ಈ ಒಂದು ಪ್ರವಾಸ ಕೈಗೊಳ್ಳುವದರಿಂದ ಯಾತ್ರಿಕನಿಗೆ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲಕರವಾಗಿರುತ್ತದೆ. ಏಕೆಂದರೆ ಈ ಒಂದು ಪ್ರಾಕೃತಿಕ ಪಶ್ಚಿಮ ಘಟ್ಟದಲ್ಲಿ ಬರುವಂತಹ ಕೆಲವೊಂದಿಷ್ಟು ಸ್ಥಳಗಳು ಯಾತ್ರಿಕರನ್ನು ಮನವಲಿಸುವಂತೆ ಮಾಡುತ್ತದೆ ಎಂದು ಹೇಳಬಹುದು. ಈ ಒಂದು ಪಶ್ಚಿಮ ಘಟ್ಟದಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಒಳಗೊಂಡಿದ್ದು ಹಾಗು ವೈವಿಧ್ಯಮಯದಿಂದ ಕೂಡಿರುವದರಿಂದ ಯಾತ್ರಿಕರು ಪ್ರವಾಸವನ್ನು ಕೈಗೊಳ್ಳುತ್ತಾರೆ.

## 2. ಪ್ರವಾಸವನ್ನು ಕೈಗೊಳ್ಳಲು ಪ್ರಮುಖವಾದ ಕಾರಣಗಳು

1.ಕರ್ನಾಟಕದಲ್ಲಿ ಕಂಡುಬರುವ ಅದರಲ್ಲಿಯು ಪಶ್ಚಿಮ ಘಟ್ಟದಲ್ಲಿ ಕಂಡುಬರುವ ನೈಸರ್ಗಿಕಸಂಪನ್ಮೂಲಗಳ ಅಧ್ಯಯನವಾಗಿದೆ ಅಲ್ಲಿಯ ಭೌಗೋಳಿಕ ಪ್ರದೇಶವಾದಗಳ ಬಗ್ಗೆ ಪರಿಚಯ ಮಾಡಲಿಕ್ಕೆ ಪ್ರವಾಸವನ್ನು ಕೈಗೊಳ್ಳುತ್ತವೆ.

2. ಪಶ್ಚಿಮ ಘಟ್ಟದಲ್ಲಿ ವಾಸಿಸುವಂತಹ ಜನರ ಜೀವನಮಟ್ಟವನ್ನು ಪ್ರವಾಸದಿಂದ ಅಳೆಯಬಹುದು.

3. ಈ ಒಂದು ಪ್ರವಾಸವನ್ನು ಕೈಗೋಳ್ಳುವುದರಿಂದ ವಿದ್ಯಾರ್ಥಿಗಳಿಗಾಗಲಿ ಯಾತ್ರಿಕರಿಗಾಗಲಿ ತುಂಬಾ ಅನುಕೂಲಕರವಾಗಿದೆ ಎಂದು ಹೇಳಬಹುದು ಏಕೆಂದರೆ ಕರ್ನಾಟಕದ ಸೌಂದರ್ಯವನ್ನು ತಿಳಿದುಕೊಳ್ಳಬಹುದಾಗಿದೆ



Scanned with Oken Scanner

4. ಇದರಿಂದ ಕರ್ನಾಟಕದಲ್ಲಿ ದಕ್ಷಿಣ ಕನ್ನಡ ಭಾಗದಲ್ಲಿ ಕಂಡುಬರುವ ಪುಣ್ಯ ಕ್ಷೇತ್ರಗಳು ಯಾವ ತೆರನಾಗಿ ಎಲ್ಲ ಜನಾಂಗಗಳು ಏಕತಾ ಮನೋಭಾವನೆ ಮೂಡಿಸುವಂತಹ ಕ್ಷೇತ್ರಗಳಾಗಿದ್ದು, ಇವುಗಳ ವೈಶಿಷ್ಟತೆಯನ್ನು ತಿಳಿದುಕೊಳ್ಳಬಹುದು.

5. ಪ್ರವಾಸಮಾಡುವುದರಿಂದ ಉತ್ತರ ಕನ್ನಡಕ್ಕೂ ನೈಸರ್ಗಿಕ ಪ್ರದೇಶಗಳಲ್ಲಿ, ಯಾವ ತೆರನಾದ ನೈಸರ್ಗಿಕ ಭಿನ್ನಗಳಿವೆ ಎಂಬುದನ್ನು ತಿಳಿದುಕೊಳ್ಳಬಹುದು.



Scanned with Oken Scanner

## 3. ಉದ್ದೇಶಗಳು -

ಮಹಾವಿದ್ಯಾಲಯದ ಭೂಗೋಳಶಾಸ್ತ್ರ ವಿಭಾಗದ ಬಿ.ಎ.ಅಂತಿಮ ವರ್ಷದ ಎಲ್ಲ ವಿದ್ಯಾರ್ಥಿಗಳು ಕ್ಷೇತ್ರ ಕಾರ್ಯದ ನಿಮಿತ್ಯ ಕರ್ನಾಟಕದ ಪಶ್ಚಿಮ ಘಟ್ಟ ಹಾಗೂ ಕರಾವಳಿಯ ಪ್ರದೇಶದಲ್ಲಿ ಕಂಡು ಬರುವ ಹಲವಾರು ಪ್ರವಾಸಿಯ ಸ್ಥಳಗಳನ್ನು ಕ್ಷೇತ್ರಕಾರ್ಯ ಯೋಜನೆ ಕೈಗೊಂಡು ಹಲವಾರು ಧಾರ್ಮಿಕ ಹಾಗೂ ಪ್ರಾಕೃತಿಕ ಕ್ಷೇತ್ರಗಳನ್ನು ವೀಕ್ಷಣೆ ಮಾಡಿದೆವು. ಇದರಿಂದಾಗಿ ಈ ಧಾರ್ಮಿಕ ಹಾಗೂ ಪ್ರಾಕೃತಿಕ ಕ್ಷೇತ್ರಗಳ ಮಹತ್ವ ಹಾಗೂ ಪರಿಸರದ ಬದಲಾವಣೆ,ನಗರೀಕರಣ ಮತ್ತು ಹಲವಾರು ಮಾಲಿನ್ಯಗಳನ್ನು ಕುರಿತು ವೀಕ್ಷಣೆ ಮಾಡಿದವು.

### ಉದ್ದೇಶಗಳು -

1.ಧಾರ್ಮಿಕ ಪ್ರದೇಶದ ಮಹತ್ವ ಮತ್ತು ಸಂಸ್ಕೃತಿ

2. ಪ್ರವಾಸಿಗರ ಅನುಕೂಲತೆ ಮತ್ತು ಅನಾನುಕೂಲತೆ

3. ಪರಿಸರದ ಪ್ರಾಮುಖ್ಯತೆ ಮತ್ತು ಮಾಲಿನ್ಯ

4. ಪ್ರವಾಸಿಗರಿಂದ ಆದಾಯ ಹೆಚ್ಚುವಿಕೆ

5. ನಗರೀಕರಣ

6. ಅರಣೀಕರಣ

ಈ ಮೇಲಿನ ಎಲ್ಲ ಅಂಶಗಳು ಪ್ರವಾಸ ಕ್ಷೇತ್ರಗಳಲ್ಲಿ ಗಮನಿಸಲಾಯಿತು. ಅಲ್ಲದೆ ಈ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸರಕಾರ ಹಾಗೂ ಸರಕಾರೇತರ ಸಂಘ ಸಂಸ್ಥೆಗಳು ಇನ್ನು ಹೆಚ್ಚಿನ ಒಂದು ಆಸಕ್ತಿವಹಿಸಿ ಈ ಪ್ರದೇಶದ ಸಾರಿಗೆ ಸಂಪರ್ಕ ಮತ್ತು ಪ್ರವಾಸಿಗರಿಗೆ ಅನುಕೂಲ ಹಾಗೂ ಅನಾನುಕೂಲತೆಯ ಬಗ್ಗೆ ಹೆಚ್ಚಿನ ಒಂದು ಆಸಕ್ತಿ ವಹಿಸುವುದರಿಂದ ಆ ಪ್ರದೇಶದ ಪ್ರಾಮುಖ್ಯತೆ ಇನ್ನೂ ಹೆಚ್ಚಾಗುವ ಸಾಧ್ಯತೆಗಳಿವೆ. ಎಂದು ತಿಳಿಯಲಾಗಿದೆ.



Scanned with Oken Scanner

# • ಜೋಗ ಜಲಪಾತ

**ಪೀಠಿಕೆ :-**

ಕರ್ನಾಟಕವು ಒಂದು ಸುಂದರವಾದ ಪ್ರಕೃತಿಯ ಸೊಬಗನ್ನು ಒಳಗೊಂಡಿರುವ ರಾಜ್ಯವಾಗಿದೆ. ಈ ರಾಜ್ಯದಲ್ಲಿ ಪ್ರಕೃತಿಯ ಸೌಂದರ್ಯ ನೀರಿನ ಧಾರೆ ಮತ್ತು ಕಲೆಗೂ ಹೆಸರುವಾಸಿಯಾದ ರಾಜ್ಯವೆಂದರೆ ಕರ್ನಾಟಕ.



**ಭೌಗೋಳಿಕ ಸ್ಥಾನೀಕರಣ** – ವಿಶ್ವದಲ್ಲಿರುವ ಪ್ರಸಿದ್ಧವಾದ ಜಲಪಾತಗಳಲ್ಲಿ ಅತೀ ಮುಖ್ಯವಾದ ಜಲಪಾತವಾಗಿದೆ. ಭಾರತದೇಶದ ಪ್ರಮುಖ ಜಲಪಾತಗಳಲ್ಲಿ ಜೋಗ ಸಹ ಒಂದಾಗಿದೆ, ಈ ಜೋಗ ಎಂಬ ಪ್ರದೇಶವು ಭಾರತ ದೇಶದ ದಕ್ಷಿಣ ಭಾಗದಲ್ಲಿ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿನ ಗೇರುಸೊಪ್ಪ ಬಳಿಯಲ್ಲಿ ಜೋಗ ಎಂಬ ಪ್ರದೇಶದಲ್ಲಿ ಈ ಜಲಪಾತವು ಕಂಡುಬರುತ್ತದೆ. ಈ ಜಲಪಾತ ಶರಾವತಿ ನದಿಯಿಂದ ಉಗಮವಾಗಿದ್ದು ಜೋಗ ಪ್ರದೇಶದಲ್ಲಿ 970 ಅಡಿ ಎತ್ತರದಿಂದ ಶರಾವತಿ ನದಿಯು ಮುಖ್ಯವಾಗಿ ನಾಲ್ಕು ಕವಲುಗಳಾಗಿ ಧುಮುಕುತ್ತದೆ. ಈ ಕವಲುಗಳಿಗೆ ಹೆಸರುಗಳನ್ನು ಸೂಚಿಸಲಾಗಿದ್ದು ಅವುಗಳು ರಾಜಾ ರಾಣಿ,ರೋರರ್, ರಾಕೆಟ್ ಗಳಾಗಿವೆ.



Scanned with Oken Scanner

**ಪ್ರಾಮುಖ್ಯತೆ** - ವಿಶ್ವ ಪ್ರಸಿದ್ಧ ಜೋಗ ಜಲಪಾತವು ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಈ ಜೋಗ ಜಲಪಾತವು ದೇಶದಲ್ಲಿನ ಅತೀ ಪ್ರಮುಖ ಹಾಗೂ ನೈಸರ್ಗಿಕ ಪ್ರವಾಸಿ ಸ್ಥಳಗಳಲ್ಲಿ ಒಂದಾಗಿದ್ದು ಇಲ್ಲಿ ಮುಖ್ಯವಾಗಿ ಜಲವಿದ್ಯುತ ಉತ್ಪದಿಸಲಾಗುತ್ತದೆ ವಾರ್ಷಿಕ 240 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆ ಕಂಡುಬರುತ್ತದೆ. ಮೈಸೂರು ರಾಜ್ಯ ಸಂಸ್ಥಾನವು ಅಲ್ಲಿಗೆ 1916 ಭೇಟಿ ನೀಡಿದ ಸರ್.ಎಂ.ವಿಶ್ವೇಶ್ವರಯ್ಯನವರು ಜಲಪಾತವನ್ನು ನೋಡಿ, ಇಲ್ಲಿ ಜಲ ವಿದ್ಯುತ್ ಉತ್ಪಾದನೆ ಮಾಡಲು ಯೋಜನೆ ರೂಪಿಸಿದ ಮೊದಲ ವ್ಯಕ್ತಿಯಾಗಿದ್ದಾರೆ.



ಪ್ರವಾಸಿಗರು :- ಈ ಪ್ರದೇಶದ ವೀಕ್ಷಣೆಗೆ ಪ್ರಮುಖವಾಗಿ ಹೆಚ್ಚಿನ ಪ್ರಮಾಣದಲ್ಲಿ ಸ್ವದೇಶಿಯರು ಕಂಡುಬರುತ್ತಾರೆ. ಈ ಜಲಪಾತಕ್ಕೆ ಪ್ರವಾಸಿಗರ ಭೇಟಿಯ ಕಾಲವು ಋತುಮಾನಿಕವಾಗಿದ್ದು ಜೂನ್ ನಿಂದ ಅಕ್ಟೋಬರ್ ವರೆಗೆ ಪ್ರವಾಸಿಗರು ಅಧಿಕವಾಗಿ ಉಳಿದ ಅವಧಿಯಲ್ಲಿ ಪ್ರವಾಸಿಗರ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ

ಆದಾಯದ ಮೂಲ :- ಈ ಪ್ರವಾಸಿ ಸ್ಥಳಕ್ಕೆ ಪ್ರಮುಖವಾಗಿ ಪ್ರವಾಸಿಗರಿಂದ ಪ್ರವೇಶ ಶುಲ್ಕದ ಮೂಲಕ ಆದಾಯದ ಮೂಲವನ್ನು ಕಾಣಬಹುದು ಅಲ್ಲದೇ ಇತರೆ ಮೂಲಗಳಾದ ವಾಹನ ನಿಲುಗಡೆ ಶುಲ್ಕ, ವಾಣಿಜ್ಯ ಮಳಿಗೆಗಳಿಂದ ಮತ್ತು ಪ್ರವಾಸೋಧ್ಯಮ ಇಲಾಖೆಯಿಂದ ಪ್ರವಾಸಿ ಸ್ಥಳಗಳ ಅಭಿವೃದ್ಧಿಗೆ ಬರುವ ಎಲ್ಲಾ ಆದಾಯಗಳು ಈ ಪ್ರವಾಸಿ ಸ್ಥಳದ ಆದಾಯದ ಮೂಲಗಳಾಗಿವೆ.



Scanned with Oken Scanner

**ಸೌಲಭ್ಯಗಳು** :- ಈ ಪ್ರದೇಶದಲ್ಲಿ ಪ್ರಮುಖವಾಗಿ ಪ್ರವಾಸಿಗರಿಗೆ ಪ್ರವಾಸಿ ವಾಸಸ್ಥಳಗಳನ್ನು ಕಾಣಬಹುದು ಮತ್ತು ಹೋಟೆಲ್ ಹಾಗೂ ರೆಸ್ಟೋರೆಂಟ್ ಸಹ ಕಂಡುಬರುತ್ತವೆ. ಇತರ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ಸ್ನಾನಗೃಹ, ಮುಂತಾದ ಸೌಲಭ್ಯವು ಕಂಡುಬರುತ್ತವೆ.

**ಸಾರಿಗೆ ಮತ್ತು ಸಂಪರ್ಕ** :- ಜೋಗ ಜಲಪಾತ ಪ್ರವಾಸಿ ಸ್ಥಳಕ್ಕೆ ಉತ್ತಮವಾದ ಸಾರಿಗೆ ಸಂಪರ್ಕ ವ್ಯವಸ್ಥೆ ಕಂಡುಬರುತ್ತದೆ. ಉತ್ತಮವಾದ ರಸ್ತೆ ಮಾರ್ಗ ಹೊಂದಿದೆ ಜೋಗ ಪ್ರದೇಶವು ರಾಜ್ಯದ ರಾಜಧಾನಿಯಿಂದ 488 ಕಿ.ಮೀ ದೂರದಲ್ಲಿದ್ದು ಶಿವಮೊಗ್ಗದಿಂದ 105 ಕಿ.ಮೀ ದೂರದಲ್ಲಿದೆ. ಅಲ್ಲದೇ ರಾಜ್ಯದ ವಿವಿಧ ಕಡೆಗಳಿಂದ ಸಾರಿಗೆ ಸೌಲಭ್ಯವನ್ನು ಕಾಣಬಹುದು.

**ಶಿಕ್ಷಣಕ್ಕೆ ಪೂರಕ ಯೋಜನೆಗಳು** - ಈ ಪ್ರವಾಸವು ಪ್ರಮುಖವಾಗಿ (ಎಂ.ಟಿ.ಎ) ಪ್ರವಾಸೋದ್ಯಮ ಕುರಿತು ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪೂರಕವಾಗಿದೆ. ಅಲ್ಲದೇ ಪ್ರಮುಖವಾಗಿ ಜೋಗ ಜಲಪಾತದಲ್ಲಿ ನಿರ್ಮಾಣವಾಗಿರುವ ವಿದ್ಯುತ್ ಸ್ಥಾವರಗಳ ಕುರಿತು ಅಭಿಯಂತರ ವಿದ್ಯಾರ್ಥಿಗಳಿಗೆ ಪ್ರವಾಸಿ ಸ್ಥಳಗಳೊಂದಿಗೆ ಶಿಕ್ಷಣಕ್ಕೆ ಪೂರಕವಾದ ವಿದ್ಯುತ್ ಸ್ಥಾವರ ಯೋಜನೆ ಮತ್ತು ಇತರ ಯೋಜನೆಗಳ ಬಗ್ಗೆ ತಿಳಿಸಿ ಕೊಡುತ್ತದೆ.

**ಸಮಾರೋಪ** : ಜೋಗ ಜಲಪಾತದ ಈ ಮೇಲಿನ ಅಂಶಗಳಾದ ಸ್ಥಾನೀಕರಣ ಶರಾವತಿ ನದಿಯ ಹರಿವಿಕೆಯ ಮಾರ್ಗದಿಂದ V ಆಕಾರದ ಕಣಿವೆಯ ನಿರ್ಮಾಣದ ಪ್ರಾಮುಖ್ಯತೆ ಪ್ರವಾಸಿಗರ ಭೇಟಿ ಆದಾಯದ ಮೂಲ ಕುರಿತು ಸೌಲಭ್ಯಗಳ ಕುರಿತು ಹಾಗೂ ಸಾರಿಗೆ ಸಂಪರ್ಕ ಯೋಜನೆ ಕುರಿತು ಎಲ್ಲಾ ಅಂಶಗಳಿಂದ ಜೋಗ ಜಲಪಾತದ ಕುರಿತು ಸಂಕ್ಷಿಪ್ತ ವಿವರಣೆ ತಿಳಿದು ಬರುತ್ತದೆ.



Scanned with Oken Scanner

# • ಮುರುಡೇಶ್ವರ

## ಪೀಠಿಕೆ

ಕರಾವಳಿ ಮಣ್ಣ ಕ್ಷೇತ್ರ ಮುರುಡೇಶ್ವರವು ಇದು ಪವಿತ್ರ ಶಿವ ಕ್ಷೇತ್ರ,ರಮಣೀಯವಾದ ಪ್ರಕೃತಿ ಸೌಂದರ್ಯದಿಂದ ಕೂಡಿದ ಕರ್ನಾಟಕ ರಾಜ್ಯದ ಇದು ಉ.ಕನ್ನಡ ಜಿಲ್ಲೆ ಭಟ್ಕಳ: ತಾಲೂಕಿನಲ್ಲಿ ಬರುವುದು, ಈ ಶ್ರೀ ಕ್ಷೇತ್ರವು, ಭಟ್ಕಳದಿಂದ 15 ಕಿ.ಮೀ ಹಾಗೂ ಹೊನ್ನಾವರದಿಂದ 28 ಕಿ.ಮೀ ದೂರದಲ್ಲಿದೆ. ಅತ್ತ ಬೆಟ್ಟದ ಸಾಲು ಇತ್ತ ಅರಬೀ ಸಮುದ್ರದಿಂದ ಸುತ್ತುವರೆದಿರುವ ಈ ಕ್ಷೇತ್ರದ ಸೊಬಗನ್ನು ವರ್ಣಿಸುವುದು ಕಷ್ಟ ಸಾಧ್ಯ. ಈ ಕ್ಷೇತ್ರವು ವಿವಿಧ ಧರ್ಮಗಳ ಸಂಗಮ ಕ್ಷೇತ್ರವಾಗಿ ಭಾವೈಕ್ಯತೆಯ ತಾಣವಾಗಿರುವ ಮುರುಡೇಶ್ವರದಲ್ಲಿ ಹಲವಾರು ಬಸದಿಗಳಿವೆ.

ಅರಬೀ ಸಮುದ್ರ ದಂಡೆಯ ಕುಂದಗಿರಿ ಬೆಟ್ಟದ ಮೇಲೆ ಮುರುಡೇಶ್ವರನ ದೇವಾಲಯವಿದೆ. ಇಲ್ಲಿರುವ ಶಿವಲಿಂಗ ಶಿವನ ಆತ್ಮಲಿಂಗದ ಒಂದು ಭಾಗ ಎಂದು ನಂಬಿಕೆ. ಈ ಸ್ಥಳದ ಮಹಿಮೆಯು ಹಲವಾರು ಪುರಾಣಗಳಲ್ಲಿಯೂ ಸಹ ಉಲ್ಲೇಖವಾಗಿದೆ. ಇದು ಸ್ಕಂದ ಪುರಾಣ, ಮಹಾಭಾರತದಂತಹ ಮಹಾಗ್ರಂಥಗಳಲ್ಲಿಯೂ ಸಹ ಉಲ್ಲೇಖವಾಗಿದೆ.





Scanned with Oken Scanner

**ಸ್ಥಾನ** – ಶ್ರೀ ಕ್ಷೇತ್ರವು ಕರ್ನಾಟಕ ರಾಜ್ಯದ ಭಟ್ಕಳ ತಾಲೂಕಿನ ಉತ್ತರ ಕನ್ನಡ ಜಿಲ್ಲೆಯಲ್ಲಿದ್ದು. ಇದನ್ನು ಅಕ್ಷಾಂಶ & ರೇಖಾಂಶಿಕವಾಗಿ 14°5 ಉತ್ತರ ಅಕ್ಷಾಂಶದಿಂದ 37°2 ಉತ್ತರ ಅಕ್ಷಾಂಶದವರೆಗೆ ಹರಡಿದೆ. ಪಶ್ಚಿಮಕ್ಕೆ ಅರಬೀ ಸಮುದ್ರ ಕಂಡುಬರುತ್ತದೆ.

**ಸ್ಥಳದ ವೈಶಿಷ್ಟತೆ ;-** ಈ ದೇಶದಲ್ಲಿ ಕಾಕತೀರ್ಥ ಭಿಮತೀರ್ಥ ಜರಾಯುತೀರ್ಥ ಕುಂಬತೀರ್ಥ ಎಂಬ ಚಿಕ್ಕ ಹೊರೆಗಳು ಹರಿಯುತ್ತವೆ, ಈ ಕ್ಷೇತ್ರದಲ್ಲಿ 150 ಅಡಿ ಎತ್ತರದ ಶಿವನ ಮೂರ್ತಿಯನ್ನು ಇಲ್ಲಿ ನಿರ್ಮಿಸಲಾಗಿದ್ದು, ಇಲ್ಲಿರುವ ಪುಷ್ಕರಣಿಯಲ್ಲಿ ಭಕ್ತರು ದೇವರ ದರ್ಶನ ಪಡೆಯುತ್ತಾರೆ. ಈ ಕಲ್ಯಾಣಿಯಲ್ಲಿ ವರ್ಷಕ್ಕೆರಡು ಬಾರಿ ತೆಪ್ಪೋತ್ಸವ ನಡೆಯುತ್ತದೆ. ಆ ಶಿವನ ವಿಗ್ರಹ ನಿರ್ಮಿಸಿದ ಬೆಟ್ಟದ ಕೆಳಗಡೆ ಭೂ ಕೈಲಾಸ ಎಂಬ ಹೆಸರಿನಿಂದ ಗವಿಯನ್ನು ನಿರ್ಮಿಸಿ ರಾವಣೇಶ್ವರನನ್ನು ಶಿವನಿಂದ ಯಾವ ರೀತಿ ಆತ್ಮಲಿಂಗವನ್ನು ಪಡೆದನೆಂಬ, ವಿಷಯ ಕುರಿತಾದ ಕಾಂಕ್ರೀಟ್ ಬೊಂಬೆಗಳು ಕಂಡುಬರುತ್ತವೆ.



Scanned with Oken Scanner

ಶ್ರೀ ಕ್ಷೇತ್ರದ ಅಭಿವೃದ್ಧಿಗೆ ಕಾರಣಿಕರ್ತರಾದವರು - ಶ್ರೀ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದ ಖ್ಯಾತ ಉದ್ಯಮಿ ಶ್ರೀ.ಆರ್.ಎನ್.ಶೆಟ್ಟಿಯವರು ಈ ಪ್ರಸಿದ್ಧ ಮುರುಡೇಶ್ವರ ದೇವಾಲಯವನ್ನು ಹಾಗೂ ಹೊಸದಾಗಿ ನಿರ್ಮಿಸಲಾದ 20 ಬಾಗಿಲುಳ್ಳ ಗೋಪುರವು ಸುಮಾರು 250 ಅಡಿ ಎತ್ತರವಾಗಿದೆ.

ಸಾರಿಗೆ ವ್ಯವಸ್ಥೆ :-

ಈ ಕ್ಷೇತ್ರಕ್ಕೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಿಂದ ಸಾರಿಗೆ ಸೌಲಭ್ಯ ವ್ಯವಸ್ಥೆ ಇದ್ದು ರಾಷ್ಟ್ರೀಯ ಹೆದ್ದಾರಿ 17 ಕ್ಕೆ ಹತ್ತಿರದಲ್ಲಿದೆ. ಕ್ಷೇತ್ರಕ್ಕೆ ಭಟ್ಕಳ, ಹೊನ್ನಾವರ,ಶಿವಮೊಗ್ಗಗಳಿಂದ ಹಾಗೂ ರಾಜ್ಯದ ಇತರೆ ಸ್ಥಳಗಳಿಂದ ಸಾರಿಗೆ ವ್ಯವಸ್ಥೆ ಕಂಡುಬರುತ್ತದೆ. ವಾಹನ ನಿಲುಗಡೆ ಉತ್ತಮ ಮಾರುಕಟ್ಟೆ ಸುಂದರವಾದ ಕಡಲ ತೀರದಿಂದ ನಿರ್ಮಾಣಗೊಂಡಿದೆ.

ಆದಾಯ :-

ಈ ಸ್ಥಳಕ್ಕೆ ಪ್ರತೀ ವರ್ಷಕ್ಕೆ ಸುಮಾರು 60 ಲಕ್ಷ ಸ್ವದೇಶಿ & ವಿದೇಶಿ ಪ್ರವಾಸಿಗರು ಭೇಟಿ ನಿಡುವುದರಿಂದ ಅವರಿಂದ ಶ್ರೀ ಕ್ಷೇತ್ರಕ್ಕೆ ಸುಮಾರು 100 ರಿಂದ 150 ಕೋಟಿ ರೂ.ಆದಾಯವು ಕಂಡು ಬರುತ್ತದೆ ಎಂದು ಪ್ರವಾಸೋದ್ಯಮ ಇಲಾಖೆ ವರದಿ ಮಾಡಿದೆ.



Scanned with Oken Scanner

## • ಹೊನ್ನಾವರ

ಕರ್ನಾಟಕದ ಅನೇಕ ಪ್ರಸಿದ್ಧ ಹಾಗೂ ಪ್ರೇಕ್ಷಣೀಯ ಸ್ಥಳಗಳಲ್ಲಿ ಹೊನ್ನಾವರವೂ ಸಹ ಒಂದು. ಹೊನ್ನಾವರ ಉ.ಕ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣವಾಗಿದೆ.




**ಪ್ರಾಮುಖ್ಯತೆ:-** ಹೊನ್ನಾವರ ಅರಬ್ಬಿ ಸಮುದ್ರದ ಕರಾವಳಿ & ಶರಾವತಿ ನದಿ ದಂಡೆಯ ಮೇಲಿದೆ ಇದು ಪಣಜಿ & ಮಂಗಳೂರು ನಡುವೆ ನೆಲಗೊಂಡಿದೆ. ಹೊನ್ನಾವರ ಸುತ್ತಲೂ ಪ್ರಮುಖ ಸ್ಥಳಗಳಲ್ಲಿ ಕೆಲವು ಮುರುಡೇಶ್ವರ & ಇಡಗುಂಜಿ ಧಾರ್ಮಿಕ ಪ್ರಾಮುಖ್ಯತೆಯನ್ನು & ಅರಬಿ ಸಮುದ್ರದ ರುದ್ರ ರಮಣೀಯ ನೋಟ ಹೊಂದಿರುವ ದೃಶ್ಯ ಪರ್ವತದ ಅಪ್ಸರಕೊಂಡ ಒಳಗೊಂಡತೆ ಹಲವಾರು ಪ್ರಮುಖ ಪಟ್ಟಣಗಳನ್ನು ಹೊಂದಿದೆ. ಸಹ್ಯಾದ್ರಿ ಬೆಟ್ಟದ ಶ್ರೇಣಿಯು & ಅರಬೀ ಸಮುದ್ರದ ಬೆರಗುಗೊಳಿಸುವ ಅಲೆಗಳು ಕರ್ನಾಟಕ



Scanned with Oken Scanner

ರಾಜ್ಯದ ಕರಾವಳಿ ವಲಯದ ಜೀವನ ಶೈಲಿಯನ್ನು ಪ್ರತಿ ನಿಧಿಸುತ್ತದೆ. ಸಹ್ಯಾದ್ರಿ ಬೆಟ್ಟಗಳ ಸುರಕ್ಷಿತ ಕೈ ಗಳಲ್ಲಿ ಹೊನ್ನಾವರ ತನ್ನ ಸಾಂಪ್ರದಾಯಿಕ ಇತಿಹಾಸ ಹೊಂದಿದೆ.

**ಇತಿಹಾಸ** :- ಹೊನ್ನಾವರ 254.8 ಚ.ಕೀ.ಮೀ ವಿಸ್ತೀರ್ಣ ಹೊಂದಿದೆ. ಇದು 1800 & 1817 ನಡುವೆ ಜಿಲ್ಲಾ ಕೇಂದ್ರವಾಗಿತ್ತು. 1862ರಲ್ಲಿ ಇಡೀ ಕನರಾ ಜಿಲ್ಲೆಯಲ್ಲಿ ಕೆನರಾ & ನಾರ್ಥ ಕೆನರಾ ಜಿಲ್ಲೆಗಳಾಗಿ ವಿಭಾಗಿಸಲಾಗಿತ್ತು.ನಂತರ ಬಾಂಬೆ ಪ್ರೆಸಿಡೆಂಟ್‌ಗೆ ವರ್ಗಾಯಿಸಲಾಯಿತು. ಅದಕ್ಕೂ ಪೂರ್ವದಲ್ಲಿ ಮದ್ರಾಸ್ ಅಡಿಯಲ್ಲಿತ್ತು. ಸ್ವತಂತ್ರ ನಂತರ ಹೊನ್ನಾವರ ತಾಲೂಕಾಗಿ ಕಾರ್ಯ ಸ್ಥಾನ ಪಡೆಯಿತು.



**ಪ್ರವಾಸಿಗರ ;-** ಶರಾವತಿ ನದಿಯು ಅರಬೀ ಸಮುದ್ರ ಸೇರುವ ಪೂರ್ವದಲ್ಲಿ ಕೆಲವು ದ್ವೀಪಗಳನ್ನು ಸೃಷ್ಠಿಸಿದೆ. ಉದಾಹರಣೆಗೆ ಕರ್ನಲ್ ಹಿಲ್ ಹೊನ್ನಾವರದ ಆಸಕ್ತಿ ಸ್ಥಳವಾಗಿದೆ. ಅಪ್ಸರಗೊಂಡ ಹೆಸರಿಗೆ ತಕ್ಕಂತೆ ಆಕಾಶದಲ್ಲಿ ನಿರ್ಮಿತವಾದಂತ ಸ್ವರ್ಗ ಲೋಕಕ್ಕೆ ಸಮಾನವಾದಂತೆ ಕಾಣುತ್ತದೆ. ಕಾಸರಗೋಡು ಬೀಚ್ ಮತ್ತುಂದು ಸ್ಥಳವಾಗಿದ್ದು ಹೊನ್ನಾವರದಿಂದ 38 ಕೀ ಮೀ ಇದೆ.

**ಆದಾಯ;-** ಕೃಷಿ ಮತ್ತು ಮೀನುಗಾರಿಕೆ ಜನರ ಮುಖ್ಯ ವೃತ್ತಿಯಾಗಿದ್ದು ಇವುಗಳ ಆಮದು ರಫ್ತು & ಪ್ರವಾಸಿಗರ ಶುಲ್ಕವು ಆದಾಯದ ಮೂಲವಾಗಿದೆ.

**ಸೌಲಭ್ಯಗಳು** : ಹೊನ್ನಾವರ ಪ್ರೇಕ್ಷಣೀಯ ಸ್ಥಳ,ಶಿಕ್ಷಣ,ವೃತ್ತಿ,ಸಾರಿಗೆ ಸಂಪರ್ಕ ಮೂಲಭೂತ ಸೌಕರ್ಯ ಕಂಡುಬರುತ್ತವೆ.

**ಸಾರಿಗೆ** :- ಹೊನ್ನಾವರಕ್ಕೆ ಪ್ರಮುಖವಾಗಿ ಎರಡು ರಾಷ್ಟ್ರೀಯ ಹೆದ್ದಾರಿಗಳಿವೆ. ರಾ.ಹೆ 17 ಮುಂಬೈ ಕಾರವಾರ ಬೈಂದೂರು ಕುಂದಾಪೂರ ಉಡುಪಿ ಮಂಗಳುರು ಎರ್ನಾಕುಲಂ ಗೆ ಹೊನ್ನಾವರ ಮೂಲಕ ಸಾಗಬಹುದು. ರಾ.ಹೆ 206 ತುಮಕೂರು ಹೊನ್ನಾವರ & ಬೆಂಗಳೂರು ಅರಸಿಕೇರಿ ಭದ್ರಾವತಿ ಶಿವಮೊಗ್ಗ ಆನಂದಪುರಂ ಸಾಗರ ಮತ್ತು ಜೋಗ ಮೂಲಕ ತಲುಪಬಹುದು. ರೈಲು ನಿಲ್ದಾಣ ಕಾಕತಿ ಎಂಬ ಸ್ಥಳದಲ್ಲಿದ್ದು, ನಗರದಿಂದ 5 ಕಿ.ಮೀ ದೂರದಲ್ಲಿದೆ. ಹತ್ತಿರದ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಮಂಗಳೂರು 185 ಕಿ.ಮೀ ಅಂತರದಲ್ಲಿದ್ದು ಗೋವಾ ನಿಲ್ದಾಣ 50 ಕಿ.ಮೀ ಇದ್ದು ಸಾರಿಗೆ ವ್ಯವಸ್ಥೆ ಕಂಡುಬರುತ್ತದೆ.

**ಶಿಕ್ಷಣ** :- ಹೊನ್ನಾವರ ಶಿಕ್ಷಣಕ್ಕೆ ಪ್ರಮುಖ ಸ್ಥಾನ ಪಡೆದಿದ್ದು ಅನೇಕ ಶಾಲಾ ಕಾಲೇಜುಗಳು ಕಂಡುಬರುತ್ತವೆ, ಇಲ್ಲಿ ಧರ್ಮಸ್ಥಳ ಕ್ಷೇತ್ರದ ಶಾಲಾ ಕಾಲೇಜುಗಳು ಕಂಡುಬರುತ್ತವೆ, ಅಲ್ಲದೆ ಕೆಲವು ಉದ್ಯಾನವನಗಳು ಕಂಡುಬರುತ್ತವೆ.

Scanned with Oken Scanner



Scanned with Oken Scanner

# ಇಡಗುಂಜಿ


**ಪೀಠಿಕೆ** : ಇದು ಒಂದು ಸಣ್ಣ ಹಳ್ಳಿ ಈ ಸ್ಥಳವು ಹೊನ್ನಾವರ ತಾಲೂಕ ಉ.ಕ ಜಿಲ್ಲೆಯಲ್ಲಿದೆ. ಇದು ಒಂದು ಪ್ರಸಿದ್ಧ ಸ್ಥಳವಾಗಿದೆ. ಹಿಂದೂ ಯಾಥಾ ಮತ್ತು ಪೂಜಾ ಸ್ಥಳವಾಗಿದೆ. ಇಡಗುಂಜಿಗೆ ಹತ್ತಿರವಾಗಿರುವ ಮಂಕಿ & ನವಿಲಿಗೋನ 28 ಕಿಮೀ ಹಾಗೂ 14 ಕಿ.ಮೀ ದೂರದಲ್ಲಿ ಈ ಪ್ರದೇಶ ಕಂಡುಬರುತ್ತದೆ. ಈ ಪ್ರದೇಶಕ್ಕೆ ಹತ್ತಿರದಲ್ಲಿ ಕೊಂಕಣ ರೈಲ್ವೆ ಹತ್ತಿರದಲ್ಲಿ ಹಾದು ಹೋಗಿದೆ.

**ವೈಶಿಷ್ಟ್ಯತೆಗಳು;-** ಇಡಗುಂಜಿ ದೇವಸ್ಥಾನವು 1500 ವರ್ಷಗಳ ಇತಿಹಾಸವಿರುವ ಪುರಾತನ ವೈಶಿಷ್ಟ್ಯ ದೇವಾಲಯವಾಗಿದೆ. ಈ ಗಣೇಶ ದೇವಾಲಯಕ್ಕೆ ವರ್ಷಕ್ಕೆ ಸುಮಾರು ಒಂದು ದಶ ಲಕ್ಷ ಪ್ರವಾಸಿಗರು ಕಂಡುಬರುತ್ತಾರೆ.

**ಇಡಗುಂಜಿ ಸುತ್ತಮುತ್ತಲು;-** ಶರಾವತಿ ನದಿಯ ಹತ್ತಿರವಿದೆ ಪಶ್ಚಿಮ ಕರಾವಳಿ ಭಾಗದಲ್ಲಿ ಅರಬ್ಬಿ ಸಮುದ್ರಕ್ಕೆ ಅತಿ ಸಮೀಪದಲ್ಲಿ ಈ ಪ್ರದೇಶಕ್ಕೆ ಮಂಕಿ,ಮಾವಿನಕಟ್ಟೆಯಿಂದ 14 ಕಿ.ಮೀ. ಹಾಗೂ ಹೊನ್ನಾವರದಿಂದ 28 ಕಿ.ಮೀ. ಹಾಗೂ ನವಿಲುಗೊವದಿಂದ 65 ಕಿ.ಮೀ. ದೂರವಿದೆ. ಗೋಕರ್ಣ ಈ ಸ್ಥಳಕ್ಕೆ ಹತ್ತಿರದ ರೈಲು ನಿಲ್ದಾಣವಾಗಿದೆ.

ಇಡಗುಂಜಿಯಲ್ಲಿ ವಿಶೇಷವಾಗಿ ಲಾವಾಂಚ ಬೇರಿನಿಂದ ಉಡುಗೊರೆಗಳನ್ನು ಮಾಡಲಾಗುತ್ತದೆ. ಇದನ್ನು ನೀರಿನಲ್ಲಿ ನೆನೆಸಿಟ್ಟು ದೇವರ ಮೂರ್ತಿ ಮಾಡುತ್ತಾರೆ. ಮತ್ತು ಔಷದಿ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಇದೊಂದು ಸುವಾಸನೆ ಪರಿಮಳ ನೀಡುವ ಬೇರಾಗಿದೆ ಎನ್ನಬಹುದು.





Scanned with Oken Scanner

# ಉಡುಪಿ

ಪೀಠಿಕೆ:-

ಇದೊಂದು ಐತಿಹಾಸಿಕ ಸ್ಥಳವಾಗಿದ್ದು ಪ್ರೇಕ್ಷಕರ ಕಣ್ಣಿನ ಸಳೆಯು ಒಂದು ಪವಿತ್ರ ಸ್ಥಳವಾಗಿದೆ. ಕರ್ನಾಟಕ ರಾಜ್ಯದಲ್ಲಿ ಉಡುಪಿ: ಜಿಲ್ಲಾ ಕೇಂದ್ರವಾಗಿದೆ. ಇಲ್ಲಿ ಶ್ರೀ ಕೃಷ್ಣನ ದೇವಾಲಯ ಪ್ರಸಿದ್ಧವಾಗಿದೆ.

**ಅಷ್ಟ ಮಠಗಳು:-** ಸಾಂಪ್ರದಾಯಿಕವಾಗಿ ಉಡುಪಿಯಲ್ಲಿರುವ ಅಷ್ಟ ಮಠಗಳಿವೆ ಈ ಮಠಗಳನ್ನು ಶ್ರೀ ಮಧ್ವಾಚಾರ್ಯರು ಸ್ಥಾಪಿಸಿದ್ದಾರೆ. ಅವುಗಳು ಈ ಕೆಳಗಿನಂತಿವೆ.

| ಸಂಸ್ಥಾಪಕ ಪೀಠಾಧಿಪತಿಗಳು | ಮಠಗಳು | ಜೋಡಿ |
|---|---|---|
| ಶ್ರೀ ಹೃಷಿಕೇಶ ತೀರ್ಥರು | ಪಲಿಮಾರು ಮಠ | ಮೊದಲನ ಜೋಡಿ |
| ಶ್ರೀ ನರಸಿಂಹ ತೀರ್ಥರು | ಅದಮಾರು ಮಠ | ಮೊದಲನೇ ಜೋಡಿ |
| ಶ್ರೀ ಜನಾರ್ಧನ ತೀರ್ಥರು | ಕೃಷ್ಣಪುರ ಮಠ | ಎರಡನೇ ಜೋಡಿ |
| ಶ್ರೀ ಉಪೇಂದ್ರ ತೀರ್ಥರು | ಮುತ್ತಿಗೆ ಮಠ | ಎರಡನೇ ಜೋಡಿ |
| ಶ್ರೀ ವಾಮನ ತೀರ್ಥರು | ಶೀರೂರುಮಠ | ಮೂರನೇ ಜೋಡಿ |
| ಶ್ರೀ ವಿಷ್ಣು ತೀರ್ಥರು | ಸೋದಮಠ | ಮೂರನೇ ಜೋಡಿ |
| ಶ್ರೀ ರಾಮ ತೀರ್ಥರು | ಕಾಣಿಯೂರುಮಠ | ನಾಲ್ಕನೇ ಜೋಡಿ |
| ಶ್ರೀ ಅಧೋಕ್ಷಜತೀರ್ಥರು | ಪೇಜಾವರಮಠ | ನಾಲ್ಕನೇ ಜೋಡಿ |

Scanned with Oken Scanner

ಶ್ರೀಮದ್ವಾಚಾರ್ಯರು ಶ್ರೀಕೃಷ್ಣನ ವಿಗ್ರವನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸಿ ಅವನ ಪೂಜೆಗೆ ಮತ್ತು ದ್ವೈತ ಸಿದ್ಧಾಂತ ತತ್ವಗಳನ್ನು ಸಾರಲು ಎಂಟು ಮಠಗಳನ್ನು ಸ್ಥಾಪಿಸಿ ಪ್ರತಿಯೊಂದಕ್ಕೆ ಒಬ್ಬ ಪೀಠಾಧಿಪತಿಗಳನ್ನು ನೇಮಿಸಿದ್ದಾರೆ ಎರಡು ವರ್ಷಗಳಿಗೊಮ್ಮೆ ನಡೆಯುವ ಪರ್ಯಾಯದಲ್ಲಿ ಈಎಂಟು ಮಠಗಳಲ್ಲೊಂದಕ್ಕೆ ಕೃಷ್ಣ ಮಠದ ಅಧಿಕಾರ ಹಸ್ತಾಂತರವಾಗುತ್ತದೆ.



Scanned with Oken Scanner

## ಕಲೆ ಮತ್ತು ಸಂಸ್ಕೃತಿ

ಯಕ್ಷಗಾನ,ಪ್ರಸಿದ್ಧ ನೃಶ್ಯ ಮತ್ತು ನಾಟಕ ಕಲೆ ಈ ಜಿಲ್ಲೆಯ ಅತ್ಯಂತ ಜನಪ್ರಿಯವಾಗಿದೆ. ಹಲವಾರು ಯಕ್ಷಗಾನ ತಂಡಗಳು ಉಡುಪಿಯಲ್ಲಿ ಸ್ಥಾಪಿಸಲಾಗಿದೆ. ಯಕ್ಷಗಾನ ಭೋಧನೆ ಶಾಲೆಗಳು ಈ ಸ್ಥಳದಲ್ಲಿ ಸ್ಥಾಪಿಸಲಾಗಿದೆ. ಆರಾಧನೆಗೆ ಒಂದು ರೂಪ ಸರ್ವ" ದೇವರು ಹೆಚ್ಚು ಆಡಂಬರ ಮತ್ತು ಭವ್ಯತೆಯನ್ನು ಜಿಲ್ಲೆಯ ಜೊತೆಗೆ ಎಲ್ಲಾ ಆಚರಿಸಲಾಗುತ್ತದೆ. ಇಡೀ ರಾತ್ರಿ ನಡೆಸಲಾಗುತ್ತದೆ ಮತ್ತು ಸಾವಿರಾರು ಜನರು ವೈದ್ಯ ಮೂಲಕ ನೃತ್ಯ, ಪಾದ್ರಿ, ಪೂಜೆ, ರಂಗೋಲಿ ಚಿತ್ರಗಳನ್ನು ಇತ್ಯಾದಿ ವವಧ ರೀತಿಯ ಒಲಗೊಂಡಿವೆ ಇತ್ಯಾದಿ ಜಿಲ್ಲೆಯ ಚಾಲ್ತಿಯಲ್ಲಿರುವ ಪ್ರಕೃತಿ ಪೂಜಾ ರೂಪಗಳಾಗಿ ಜಿಲ್ಲೆಯ ಗ್ರಾಮೀಣ ಪ್ರೇಕ್ಷಕ ಕ್ರೀಡೆ ಸೇರಿವೆ. ಕಂಬಳ, ಹುಂಜ ಹೋರಾಟ, ಲಗೋರಿ, ಬನ್ನಿ ಇನ್ನು ಮುಂತಾದವುಗಳು

## ಶಿಕ್ಷಣ:-

ಉಡುಪಿಯು ಕರ್ನಾಟಕದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಹೆಚ್ಚು ಇದು 92%, ಸಾಕ್ಷರತೆಹೊಂದಿದೆ. ಇಲ್ಲಿ ಪ್ರತಿವರ್ಷವು 10ನೇ ಮತ್ತು 12 ಗುಣ ಮಟ್ಟದ ಪರೀಕ್ಷೆಗಳ ಟಾಪ್ಸ್,ಉಡುಪಿ ಜಿಲ್ಲಾ ಅಂತರಾಷ್ಟ್ರೀಯವಾಗಿ ಪ್ರಸಿದ್ಧವಾದ ಶೈಕ್ಷಣಿಕ ಸಂಸ್ಥೆಗಳಿಗೆ ನೆಲೆಯಾಗಿದೆ. ಉನ್ನತ ಶಿಕ್ಷಣ: ಮಣಿಪಾಲ ಅಕಾಡೆಮಿ ಶಾಲೆ, ಕಾಲೇಜು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಾಗುತ್ತದೆ ಹಾಗೇಯೇ, ನಿಟ್ಟೆ ವಿಶ್ವವಿದ್ಯಾಲಯದ ಇದೆ, ನಿಟ್ಟೆ, ಶಿಕ್ಷಣ ಸಂಸ್ಥೆಗಳು ಒಂದು ದೊಡ್ಡ ಸಂಖ್ಯೆಯ ಮುಖ್ಯಸ್ಥರಾಗಿದ್ದಾರೆ.

## ಸಾರಿಗೆ :-

ಉಡುಪಿ ಜಿಲ್ಲಾ ಒಂದಾಗಿದೆ, ಮೂಲಕ ಹಾದು ಹೋಗುವ 2 ರಾಷ್ಟ್ರೀಯ ಹೆದ್ದಾರಿಗಳನ್ನು ಹೊಂದಿದೆ ಎನ್ಹೆಚ್ 17 (ಈಗ ರಾಷ್ಟ್ರೀಯ ಹೆದ್ದಾರಿ 66 ಎಂದು ಮರುನಾಮಕರಣ) ಮತ್ತು ಇನ್ನೊಂದು ರಾಷ್ಟ್ರೀಯ ಹೆದ್ದಾರಿ 13 ಮತ್ತು 17 ಉಡುಪಿಗೆ ಹತ್ತಿಕೊಂಡಿವೆ. ಮಂಗಳೂರು, ಕಾರವಾರ, ಮುರುಡೇಶ್ವರ, ಕೊಚ್ಚಿ, ಗೋವಾ,ರತ್ನಗಿರಿ, ಮತ್ತು ಮುಂಬೈ, ಮತ್ತೊಂದುದಲ್ಲಿ ಶಿವಮೊಗ್ಗ ಜಿಲ್ಲಾ ಸಂಪರ್ಕ ಸಾರಿಗೆ ಸೌಲಭ್ಯ ಅತಿ ಹೆಚ್ಚು ಅನುಕೂಲಕರವಾಗಿದೆ.

Scanned with Oken Scanner

## ಹತ್ತಿರವಿರುವ ಪ್ರವಾಸಿ ಸ್ಥಳಗಳು

**ಮಲ್ಪೆ** :- ಉಡುಪಿ ಪಟ್ಟಣದಿಂದ ಸುಮಾರು 6 ಕಿ.ಮೀ ದೂರದಲ್ಲಿದೆ ಇದು ಮೀನುಗಾರಿಕೆ, ಮತ್ತು ವ್ಯಾಪಾರ ಕೇಂದ್ರವಾಗಿದೆ. ಇನ್ನೊಂದು ಬಂದರುವಾದ ಆದ ಸೇಂಟ್ ಮೇರಿಪ್ ದ್ವೀಪ 12 ಕಿಮೀ ದೂರವಿದ್ದು ಒಂದು ಲೈಟಿ ಹೌಸ ಹೊಂದಿದೆ.

**ಮರವಂತೆ** :-ಉಡುಪಿಯಿಂದ 42 ಕಿ.ಮೀ. ರಾಷ್ಟ್ರೀಯ ಹೆದ್ದಾರಿ 65 ಈ ಪ್ರದೇಶ ಕಂಡುಬರುತ್ತದೆ. ಸುಮಾರು 10 ಕಿಮೀ. ಪ್ರಯಾಣದ ನಂತರ ಕುಂದಾಪುರ ಸಮುದ್ರ ಕಾಣುತ್ತವೆ.

**ಕಾರ್ಕಳ** :-ಇದು ಉಡುಪಿಯಿಂದ ಸುಮಾರು 37 ಕಿಮೀ ಜೈನ ಬಸದಿ ಮತ್ತು ದೈತ್ಯ ಪ್ರತಿಮೆಯ ಬಸದಿ ಕಂಡುಬರುತ್ತದೆ ಶ್ರೀ ವೆಂಕಟರಮಣ ದೇವಾಲಯ ಅತ್ತೂರು ಸೇಂಟ್ ಲಾರೇನ್ಸ್ ಚರ್ಚ್ ಕಂಡುಬರುತ್ತದೆ.

**ಸೌಲಭ್ಯಗಳು**:- ಶ್ರೀಕೃಷ್ಣನ ದೇವಸ್ಥಾನದಲ್ಲಿ ಪ್ರತಿದಿನವು ಊಟ ಮತ್ತು ವಸತಿ ಸೌಲಭ್ಯ ಹೊಂದಿದೆ.



Scanned with Oken Scanner

# • ಧರ್ಮಸ್ಥಳ

**ಭೌಗೋಳಿಕ ಸ್ಥಾನ :-**

12,57 ಉತ್ತರ ಅಕ್ಷಾಂಶದಿಂದ

12,36 ಉತ್ತರ ಅಕ್ಷಾಂಶದ ವರೆಗೆ 75,22 ಪೂರ್ವ ರೇಖಾಂಶದಿಂದ

75,22 ಪೂರ್ವ ರೇಖಾಂಶದ ವರೆಗೆ




**ಪೀಠಿಕೆ** :- ಧರ್ಮಸ್ಥಳವು ಭಾರತದ ಕರ್ನಾಟಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ನೇತ್ರವಾತಿ ನದಿಯ ದಡದಲ್ಲಿ ಇರುವ ಒಂದು ಧಾರ್ಮಿಕ ಕೇಂದ್ರವಾಗಿದ್ದು ಇದು ಒಂದು ಪಂಚಾಯ್ತಿ ಕೇಂದ್ರವು ಹೌದು ಧರ್ಮಸ್ಥಳವು ಮಂಜುನಾಥ ಅಮ್ಮನವರ ಚಂದ್ರನಾಥ, ದೇವನಾಥ ಸ್ವಾಮಿ ಅಣ್ಣಪ್ಪ ಬಾಹುಬಲಿ,ಮುಂತಾದ ದೇವಸ್ಥಾನಗಳನ್ನು ಒಳಗೊಂಡಿದೆ. ಈ ದೇವಸ್ಥಾನದ ಆಡಳಿತವು ಜೈನ ಮನೆತನದವರಿಂದಲೂ ಪೂಜಾ ವಿಧಿ ವಿಧಾನಗಳು ನೆರವೇರಿಸುತ್ತಾರೆ. ಲಕ್ಷ ದೀಪೋತ್ಸವ ಇದು ಒಂದು ಪ್ರಮುಖ ಪೂಜೆಯಾಗಿದೆ.



Scanned with Oken Scanner

- ಬಾಹುಬಲಿ ಮೂರ್ತಿ –

1973 ರಲ್ಲಿ ಏಕಶಿಲೆಯಲ್ಲಿ ಬಾಹುಬಲಿ ಮೂರ್ತಿಯನ್ನು ಧರ್ಮಸ್ಥಳದ ಪಕ್ಕದ ಎತ್ತರವಾದ ಬೆಟ್ಟದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇದು 39 ಅಡಿ (12ಮೀ) ಎತ್ತರಹೊಂದಿದ್ದು 175 ಟನ್ ಭಾಗ ಹೊಂದಿದೆ.



ಮಂಜುನಾಥ ವಸ್ತುಸಂಗ್ರಹಾಲಯ –

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸಾಂಸ್ಕೃತಿಕ & ಸಂಶೋಧನಾ ಸಂಸ್ಥೆಯು ಪ್ರಾಚೀನ ಸಂಸ್ಕೃತಿಕ ಪರಿಕರ, ಚಿತ್ರಕಲೆ,ಕರಕುಶಲ ಕಲೆಗಳನ್ನು ಸಂರಕ್ಷಿಸಿ ಪ್ರದರ್ಶನಕ್ಕಿಟ್ಟಿದ್ದಾರೆ.

**ಹೆಗ್ಗಡೆ ಮನೆತನ** :- ಪ್ರಸ್ತುತ ಪದ್ಮಭೂಷಣ ಡಾ. ವೀರೇಂದ್ರ ಹೆಗ್ಗಡೆಯವರು 21 ನೇ ಧರ್ಮಾಧಿಕಾರಿಯಾಗಿದ್ದಾರೆ ಅವರು ಅನೇಕ ಸಾಮಾಜಿಕ ಧಾಮಿಕ ಶೈಕ್ಷಣಿಕ ಸಾಂಸ್ಕರತಿಕ ವೈದ್ಯಕೀಯ ಕಾರ್ಯಕ್ರಮ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅವುಗಳಲ್ಲಿ ಸಾಮೂಹಿಕ ಮದುವೆ ಸಮಾರಂಭವು 1973ರಿಂದಲೇ ಪಾರಂಭವಾಗಿದೆ.



Scanned with Oken Scanner

## ಸಾಮಾಜಿಕ ಸೇವೆಗಳು :-

ಸರ್ವಧರ್ಮ ಸಾಮೂಹಿಕ ವಿವಾಹ :- ವರದಕ್ಷಿಣೆಯ ವಿರುದ್ಧ ಹಾಗೂ ವಿವಿಧ ಜಾತಿ ಪಂಗಡಗಳ ಅನಿಷ್ಠ ಪದ್ಧತಿಯ ವಿರುದ್ಧ ಹಾಗೂ ಆಡಂಭರದ ವೈಭವೋಪೇತ ಮದುವೆ ಸಮಾರಂಭಗಳ ಬದಲಿಯಾಗಿ ಸರಳ ಸಾಮೂಹಿಕ ವಿವಾಹಗಳನ್ನು ಮಾಡಲಾಗುತ್ತಿದೆ.

## ಅನ್ನದಾನ :-

ಪ್ರತಿದಿನ ಸುಮಾರು 10,000 ಭಕ್ತಾದಿಗಳಿಗೆ ಅನ್ನ ಸಂಪರ್ಪಣೆ ನೆರವೇರುವುದು. ಶ್ರೀ ಕ್ಷೇತ್ರದ ದರ್ಶನವನ್ನು ಪಡೆಯುವವರು ಯಾವುದೇ ತಾರತಮ್ಯ ಮಾಡದೇ ಆದರದಿಂದ ಸ್ವಾಗತಿಸಲಾಗುತ್ತದೆ. ಆಧುನಿಕ ಯಂತ್ರಗಳಿಂದ ಏಕಕಾಲದಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಇದಕ್ಕೆ ಅನ್ನಪೂರ್ಣ ಕ್ಷೇತ್ರ ಎಂದು ಕರೆಯುವರು.

## ವಿದ್ಯಾ ದಾನ :-

ಶ್ರೀ ಕ್ಷೇತ್ರ ಧರ್ಮಸ್ಥಳ ಶಯಕ್ಷಣಿಕ ಕಮಿಟಿಯು ಸುಮಾರು 25ಕ್ಕೂ ಹೆಚ್ಚು ವಿದ್ಯಾ ಸಂಸ್ಥೆಗಲನ್ನು ನಡೆಸುತ್ತದೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಗುರುಕುಲ ಯೋಗ, ಆಯುಷ್ ವೈದ್ಯಕೀಯ ತಾಂತ್ರಿಕ ಇಂಜಿನೀಯರಿಂಗ್ ವೃತ್ತಿ ಪರ ಕೋರ್ಸಗಳನ್ನು ನಡೆಸುತ್ತಿದೆ.

## ಪ್ರಮುಖ ವಿದ್ಯಾ ಸಂಸ್ಥೆಗಳು

- ಎಸ್.ಡಿ.ಎಂ ಕಾಲೇಜು ಉಜಿರ
- ಎಸ್.ಡಿ.ಎಂ ವೈದ್ಯಕೀಯ ಕಾಲೇಜು ಧಾರವಾಡ
- ಎಸ್.ಡಿ.ಎಂ ಕಾನೂನು ಕಾಲೇಜು ಮಂಗಳೂರು
- ಎಸ್.ಡಿ.ಎಂ ತಾಂತ್ರಿಕ & ಅಭಿಯಣತರ ಕಾಲೇಜು ಧಾರವಾಡ

## ಔಷಧ ದಾನ :-

ಸಮಸ್ತ ಮಲೆನಾಡಿನ ಪ್ರದೇಶಕ್ಕೆ ಉಚಿತ ಹಾಗೂ ಯೋಗ್ಯ ರೀತಿಯ ಆರೋಗ್ಯ ಔಷಧಿ ತುರ್ತು ಸೇವೆ,ಮೊಬೈಲ್ ಮೂಲಕ ಸಲಹಾ ಸೇವೆಗಳನ್ನು ನೀಡುತ್ತದೆ.



Scanned with Oken Scanner

# • ಹೊರನಾಡು

ಪಶ್ಚಿಮ ಘಟ್ಟಗಳ ಮಡಿಲಲ್ಲಿ, ತುಂಗೆಯ ಉಗಮದಲ್ಲಿ ಇರುವ ಹೊರನಾಡು ಒಂದು ಸುಂದರ ಸ್ಥಳ ಇದು ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಹೊರನಾಡಿನಲ್ಲಿರುವ ಅನ್ನಪೂರ್ಣೇಶ್ವರಿ ದೇವಾಲಯದಿಂದಾಗಿ, ಇಂದು ಒಂದು ಪ್ರೇಕ್ಷಣೀಯ ಸ್ಥಳವಾಗಿ ಮತ್ತು ಬಹು ಜನ ಪ್ರವಾಸಿಗರು ಬರುವ ಧಾರ್ಮಿಕ ಸ್ಥಳವಾಗಿ ಹೆಸರುವಾಸಿಯಾಗಿದ್ದರೂ, ಮೂಲತ: ಇದು ಒಂದು ಚೆಂದದ ತಾಣ. ಇಲ್ಲಿ ಪ್ರಕೃತಿ ಸಂಪತ್ತು ಕಾಲು ಮುರಿದು ಬಿದ್ದಿದ ಎಂದರೆ ಅದು ಕ್ಲೀಶ ಆದೀತು. ಒಂದು ಕಡೆ ತುಂಗಾ ನದಿ, ಇನ್ನೊಂದೆಡೆ ಎತ್ತರವಾದ ಬೆಟ್ಟಗಳು, ಆ ಬೆಟ್ಟದ ಕಿಬ್ಬದಿಗಳಲ್ಲಿ ಅಡಿಕ ತೋಟಗಳು, ಅಲ್ಲಲ್ಲಿ ಹಸಿರು ತುಂಬಿದ ಗದ್ದೆಗಳು, ಸುತ್ತಲೂ ವಿವಿಧ ರೀತಿಯ ಮರಗಳು, ಅವುಗಳಲ್ಲು ಉಲಿಯುತ್ತಿರುವ ಹಕ್ಕಿಗಳು - ಈ ಚಿತ್ರಣವು ಹೊರನಾಡನ್ನು ಸುಂದರ ಸ್ಥಳವನ್ನಾಗಿ ಮಾಡಿದೆ. ಈ ಬೆಟ್ಟ ಗುಡ್ಡಗಳ ಮಧ್ಯೆ ಇರುವ ದಿಬ್ಬದ ಮೇಲಿರುವ ಅನ್ನಪೂರ್ಣೇಶ್ವರಿ ದೇವಾಲಯವು ಹಸಿರಿನ ಮಧ್ಯೆ ಶೋಭಿಸುತ್ತಿದೆ ಎನ್ನಬಹುದು.






**ಇತಿಹಾಸ ;-** ಲಿಖಿತ ಇತಿಹಾಸವನ್ನು ಮಾತ್ರ ಗಮನಿಸಿದರೆ, ಹೊರನಾಡಿಗೆ ಅಂತಹ ಪುರಾತನ ಲಿಖಿತ ಇತಿಹಾಸ ಇರುವಂತೆ ಕಾಣದು. ಕೆಲವು ನೂರು ವರ್ಷಗಳಿಂದ ಈ ಸ್ಥಳದಲ್ಲಿ ದೇವಾಲಯವಿದ್ದಂತೆ ಕಂಡುಬರುತ್ತದೆ, ಭದ್ರಾ ನದಿಯ ಒಳ ಭಾಗದಲ್ಲಿರುವುದರಿಂದ, ೨೦ ನೆಯ ಶತಮಾನದ ಕೊನೆಯ ದಶಕಗಳ ತನಕವೂ ಇಲ್ಲಿಗೆ ಬರುವುದು ತುಂಬಾ ಕಷ್ಟದ ದಾರಿಯಾಗಿತ್ತು.

ಮತ್ತೊಂದೆಡೆ ಪಶ್ಚಿಮಘಟ್ಟದ ಪರ್ವತಗಳು ಕೋಟೆಯಂತೆ ಈ ಪ್ರದೇಶವನ್ನು ಸುತ್ತುವರಿದಿವೆ. ಆದರೆ, ನವ ಶಿಲಾಯುಗದ ಕಾಲದಿಂದ ಇಲ್ಲಿ ಜನವಸತಿ ಇದ್ದ ಸೂಚನೆಗಳಿವೆ. ಈ ಸುತ್ತಲಿನ ಘಟ್ಟ ಪ್ರದೇಶಗಳಲ್ಲಿ ನಿಲುವುಗಲ್ಲುಗಳು ಮತ್ತು ಪುರಾತನ ಜನವಸತಿಯ ಕುರುಹುಗಳು ಕಂಡುಬಂದಿವೆ. ಸನಿಹದ ತುಂಗಾ ನದಿಯಲ್ಲಿರುವ ಭೀಮನ ಹೆಸರಿನೊಂದಿಗೆ ತಳುಕು ಹಾಕಿಕೊಂಡಿರುವ ಕಲ್ಲುಗಳಿಂದಾಗಿ, ಇಲ್ಲಿನ ಇತಿಹಾಸವನ್ನು ಕನಿಷ್ಠ ೨೫೦೦ ವರ್ಷಗಳಷ್ಟು ಹಿಂದಕ್ಕೆ ತೆಗೆದುಕೊಂಡು ಹೋಗಬಹುದು.

## ಪರಿಸರ ವೀಕ್ಷಣೆಗೆ ಅವಕಾಶಗಳು

ಇಲ್ಲಿ ಪಕ್ಷಿ ವೀಕ್ಷಣೆಗೆ ವಿಪುಲ ಅವಕಾಶಗಳಿವೆ. ಪಶ್ಚಿಮ ಘಟ್ಟಗಳಲ್ಲಿ ಕಾಣಬರುವ ಅಪರೂಪದ ಪಕ್ಷಿಗಳನ್ನು ವೀಕ್ಷಿಸಲು ಮತ್ತು ಅಧ್ಯಯನ ನಡೆಸಲು ಇಲ್ಲಿ ಅವಕಾಶ ಉಂಟು. ದಟ್ಟವಾದ ಕಾಡುಗಳಿಗಿಂತ,ತೋಟ, ಬಯಲು ಮತ್ತು ಎತ್ತರವಾದ ತರದ ಪ್ರದೇಶಗಳಲ್ಲಿ ಪಕ್ಷಿಗಳನ್ನು ನೋಡುವುದು ಮತ್ತು ಗುರುತಿಸುವುದು ಸುಲಭ. ಈ ಸುತ್ತಲೂ ತುಂಬಾ ಕಾಡು ಪ್ರದೇಶ ಮತ್ತು ಎತ್ತರವದ ಬೆಟ್ಟಗಳು ಇರುವುದು ನಿಜವಾದರೂ, ಕಾಡು ಪ್ರಾಣಿಗಳನ್ನು ನೋಡುವುದು ಇಲ್ಲಿ ಸ್ವಲ್ಪ ಕಷ್ಟವೆಂದೇ ಹೇಳಬಹುದು. ಸುತ್ತಲಿನ ಅರಣ್ಯ ಪ್ರದೇಶಗಳಲ್ಲಿ, ಹುಲಿ, ಕಾಡಮ್ಮ, ಜಿಂಕೆ ಮೊದಲಾದ ಪ್ರಾಣಿಗಳು ಇರುವುದು ಸಹಜವಾದರೂ, ಜನರ ಕಣ್ಣಿಗೆ ಅವು ಬೀಳುವುದಿಲ್ಲ ಮತ್ತು ಅವುಗಳನ್ನು ವೀಕ್ಷಿಸಲು ವ್ಯವಸ್ಥೆ ಇಲ್ಲಿ ಇಲ್ಲ.

## ಅನ್ನಪೂರ್ಣೇಶ್ವರಿ ದೇವಾಲಯ

ಹೊರನಾಡು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನಲ್ಲಿದೆ. ಹೊರನಾಡಿನಲ್ಲಿರುವ ಅನ್ನಪೂರ್ಣೇಶ್ವರಿ ದೇವಾಲಯವು ಈಗ ಕರ್ನಾಟಕದಾದ್ಯಂತ ಹೆಸರು ಪಡೆದಿದೆ.ಇದಕ್ಕೆ ಮುಖ್ಯಕಾರಣವೆಂದರೆ, ೧೯೮೦-೧೯೯೦ ರ ದಶಕದಲ್ಲಿ ವಾಹನಗಳು ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರಲು ಅನುಕೂಲವಾದದ್ದರಿಂದ, ಶೃಂಗೇರಿಗೆ ಬರುವ ಪ್ರವಾಸಿಗರು, ಅಲ್ಲಿಂದ ೭೦ ಕಿ.ಮಿ.ದೂರ ಇರುವ ಹೊರನಾಡಿಗೂ ಬರತೊಡಗಿದರು, ಅದಕ್ಕೂ ಹಿಂದೆ, ಇಲ್ಲಿನ ಅನ್ನಪೂರ್ಣೇಶ್ವರಿ ದೇವಾಲಯದ ವೈಶಿಷ್ಟ್ಯವೆಂದರೆ, ಯಾವುದೇ ಸಮಯದಲ್ಲಿ ಭೇಟಿ ಕೊಡುವ ಜನರಿಗೂ ಇಲ್ಲಿ ಊಟ ಅಥವಾ ಉಪಹಾರವನ್ನು ನೀಡುವ ಪದ್ಧತಿ ಇತ್ತು – ರಾತ್ರಿ ಬಂದವರಿಗೂ ತಿನಿಸು ಅಥವಾ ಊಟವನ್ನು ಕೊಡುವ ಪದ್ಧತಿ ಇಲ್ಲಿತ್ತು. ಕ್ರಮೇಣ ಇಲ್ಲಿಗೆ ಭೇಟಿ ನೀಡುವ ಜನರ ಸಂಖ್ಯೆ ಜಾಸ್ತಿಯಾದಂತೆಲ್ಲ, ವಸತಿ ವ್ಯವಸ್ಥೆ ಮತ್ತಿತರ ವ್ಯವಸ್ಥೆಗಳ ಅನುಕೂಲಗಳು ಹೆಚ್ಚಾದವು ಮತ್ತು ಅಂಗಡಿ ಮುಂಗಟ್ಟುಗಳೂ ತಲೆ ಎತ್ತಿದವು.ಇಲ್ಲಿ ಮಳೆಗಾಲದ ಮೂರು ತಿಂಗಳಿನಲ್ಲಿ ಮಳೆ ವಿಪರೀತವಿರುವುದರಿಂದ, ಸ್ವಲ್ಪ ಅನನುಕೂಲವಾಗಬಹುದು.



Scanned with Oken Scanner

# • ಶೃಂಗೇರಿಯ ಶ್ರೀಶಾರದಾಂಬೆ

ಶೃಂಗೇರಿ ಭಾರತದ ಕರ್ನಾಟಕ ರಾಜ್ಯದ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಪಶ್ಚಿಮ ಘಟ್ಟಗಳ ಮಡಿಲಿನಲ್ಲಿರುವ ಒಂದು ಚಿಕ್ಕ ಪಟ್ಟಣ. ೮ ನೇಶತಮಾನದಲ್ಲಿ ಅದ್ವೈತ ವೇದಾಂತದ ಸ್ಥಾಪಿಸಿದ ನಾಲ್ಕು ಮಠದಲ್ಲಿ ಮೊದಲನೆಯದನ್ನು ಹೊಂದಿರುವ ಕ್ಷೇತ್ರ ಶೃಂಗೇರಿ. ಶಂಕರಾಚಾರ್ಯರು ಸ್ಥಾಪಿಸಿದ ಇತರ ಮಠಗಳು ಬದರಿನಾಥ, ಪುರಿ ಮತ್ತು ದ್ವಾರಿಕೆಗಳಲ್ಲಿವೆ. ಇದು ತುಂಗಾ ನದಿಯ ತಟದಲ್ಲಿರುವ ಚಿಕ್ಕಪಟ್ಟಣ, ಚಿಕ್ಕಮಂಗಳೂರು ಜಿಲ್ಲೆಯ ತಾಲೂಕುಗಳಲ್ಲಿ ಒಂದಾಗಿದೆ, ಇತಿವೃತ್ತ ಸಂಪಾದಿಸಿ



- ಶೃಂಗೇರಿ ಎಂಬ ಹೆಸರು ಋಷ್ಯ ಶೃಂಗಗಿರಿ ಎಂಬ ಹೆಸರಿನಿಂದ ಬಂದಿದೆ. ಇದು ಸಮಿಪದಲ್ಲೆ ಇರುವ ಒಂದು ಬೆಟ್ಟದ ಹೆಸರು. ಪ್ರತೀತಿಗನುಸಾರವಾಗಿ ಈ ಬೆಟ್ಟದಲ್ಲಿ ಋಷಿ ವಿಭಾಂಡಕ ಮತ್ತು ಅವನ ಮಗ ಋಷ್ಯ ಶೃಂಗ ಇದ್ದದ್ದು ಋಷ್ಯಶೃಂಗನ ಪ್ರಸ್ತಾಪ ರಾಮಾಯಣದ ಬಾಲಕಾಂಡದಲ್ಲಿ ಬರುತ್ತದೆ. ವಸಿಷ್ಠ ತಿಳಿಸುವ ಉಪಕಥೆಗಳಲ್ಲಿ ಒಂದರಲ್ಲಿ ಋಷ್ಯಶೃಂಗ ರೋಮಪಾದ ರಾಜ್ಯದಲ್ಲಿ ಮಳೆ ತರಿಸಿದ ಕಥೆ



Scanned with Oken Scanner

- ಶೃಂಗೇರಿಯ ಅನೇಕ ದೇವಸ್ಥಾನಗಳಲ್ಲಿ ಮುಖ್ಯವಾದದ್ದು ವಿದ್ಯಾಶಂಕರ ದೇವಸ್ಥಾನ, ಇದನ್ನು 14ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರಾದ ಹಕ್ಕ- ಬುಕ್ಕರ ಗುರು ಮಹರ್ಷಿ ವಿದ್ಯಾರಣ್ಯರು ಕಟ್ಟಿಸಿದರು ಈ ದೇವಾಲಯದ ಶಾಸನಗಳಲ್ಲಿ ನಂತರ ಅನೇಕ ವಿಜಯನಗರ ಅರಸರು ಈ ದೇವಾಲಕ್ಕೆ ಕೊಟ್ಟ ಕಾಣಿಕೆಗಳ ದಾಖಲೆಗಳಿವೆ" ವಿಜಯನಗರ ಕಾಲದಲ್ಲಿ ಕಟ್ಟಿಸಿದರಾದರೂ ಈ ದೇವಾಲಯ ಇನ್ನು ಹಿಂದಿನ ಹೊಯ್ಸಳ ದೇವಾಲಯದ ಸ್ಥಾನದಲ್ಲಿ ಕಟ್ಟಿದ್ದೆಂದು ನಂಬಲಾಗಿದೆ.
- ವಿಜಯನಗರದ ಕಾಲದ ಶಿಲ್ಪಕಲೆ ಮತ್ತು ಹೊಯ್ಸಳ ಕಾಲದ ಶಿಲ್ಪಕಲೆ ಎರಡರ ಸಮಾಗಮವನ್ನು ಈ ದೇವಸ್ಥಾನದಲ್ಲಿ ಕಾಣಬಹುದು ವಿದ್ಯಾಶಂಕರ ದೇವಾಲಯದಲ್ಲಿ ಮೇಷಾದಿ ರಾಶಿ ಸೂಚಕ ಕಂಬಗಳಿವೆ. ಈ ರಾಶಿ ಕಂಬಗಳ ವೈಶಿಷ್ಟ್ಯವೆಂದರೆ ಸೂರ್ಯ ಯಾವ ರಾಶಿಯಲ್ಲಿರುತ್ತಾನೊ ಆ ರಾಶಿ ಸೂಚಕ ಕಂಬದ ಮೇಲೆ ಪ್ರಥಮ ಉಷಾ ಕಿರಣಗಳು ಬೀಳುತ್ತವೆ.
- ಶೃಂಗೇರಿಯ ಇತಿಹಾಸಕ್ಕೆ ಎರಡು ದೇವಾಲಯಗಳಿವೆ. ಋಷ್ಯಶೃಂಗರ ತಂದೆಯವರಾದ ವಿಭಾಂಡಕ ಮಹರ್ಷಿಗಳು, ತಾವು ಪೂಜಿಸುತ್ತಿದ್ದ ಶಿವಲಿಂಗದಲ್ಲಿ ಕಡೆಗೆ, ಐಕ್ಯರಾದರೆಂಬ ಪ್ರತಿತಿ ಇದೆ. ಅದು ಶೃಂಗೇರಿ ಪಟ್ಟಣದ ಹತ್ತಿರದ ಒಂದು ಗುಡ್ಡದ ಮೇಲಿದೆ.ಇದಕ್ಕೆ ಮಲಹಾನಿಕರೇಶ್ವರ ಎಂಬ ಹೆಸರಿದ್ದು, ಈ ಸ್ಥಳದಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿದ್ದಾರೆ
- ಶೃಂಗೇರಿಗೆ 10 ಕಿ.ಮೀ. ಗಳ ದೂರದಲ್ಲಿ ಕಿಗ್ಗ ಅಥವಾ ಋಷ್ಯಶೃಂಗಪುರವೆಂಬ ಊರಿದೆ. ಇಲ್ಲಿ ಋಷ್ಯಶೃಂಗರ ಆತ್ಮಜ್ಯೋತಿ, ತಾವೂ ನಿತ್ಯವೂ ಆರಾಧಿಸುತ್ತಿದ್ದ ಶಿವಲಿಂಗದೊಳಗೆ ನರಸಿಂಗರಾಜಪುರನ್ನೊಳಗೊಂಡ ಶೃಂಗೇರಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿದೆ.
- ಇದು ಜಿಲ್ಲಾ ಕೇಂದ್ರವಾದ ಚಿಕ್ಕಮಂಗಳೂರಿನಿಂದ 89 ಕಿ.ಮೀ.ಗಳ ದೂರದಲ್ಲಿದೆ ಬೀರೂರು ಮತ್ತು ಶಿವಮೊಗ್ಗದ ರೈಲ್ವೆಸ್ಥಾನಕರಿಂದ ಶೃಂಗೇರಿ ಸುಮಾರು 96ಕಿ.ಮೀ. ದೂರದಲ್ಲಿದೆ. ರಸ್ತೆಯಲ್ಲಿ ಪ್ರಮಾಣ ಮಾಡಿದರೆ ಮಂಗಳೂರು ಇಲ್ಲಿಗೆ 107 ಕಿ.ಮಿ ದೂರದಲ್ಲಿದೆ.320ಕಿ.ಮೀ.ದೂರದ ಬೆಂಗಳೂರಿಗೆ ಹಗಲು ರಾತ್ರಿಯ ಸೌಲಭ್ಯವಿದ್ದು,ಕಾಡು,ಕಣಿವೆ,ಗಿರಿಗಳಮದ್ಯೆ, ನಿಸರ್ಗದ ರುದ್ರರಮಣೀಯತೆಯನ್ನು ಪ್ರಯಾಣಿಸುವಾಗ ನೋಡಿ ಅನುಭವಿಸಬಹುದಾಗಿದೆ
- ಇಲ್ಲಿನ ಬಹುಪಾಲು ಜನ ಜೀವನಕ್ಕೆ ಕೃಷಿಯನ್ನು ಅವಲಂಬಿಸಿದ್ದಾರೆ. ಅಡಿಕೆ ಹಾಗು ಭತ್ತ ಇಲ್ಲಿನ ಮುಖ್ಯ ಬೆಳೆಗಳಾಗಿವೆ. ಕಾಫಿ, ಬಳೆ, ವೆನಿಲ್ಲಾ, ವೀಳ್ಯದೆಲೆ, ಕರಿಮೆಣಸು, ಮತ್ತು ಏಲಕ್ಕಿಯನ್ನು ಅಡಿಕೆಯೊಂದಿಗೆ ಮಿಶ್ರಬೆಳೆಗಳಾಗಿ ಬೆಳೆಯುತ್ತಾರೆ.



Scanned with Oken Scanner



Scanned with Oken Scanner

## 4. ಸಲಹೆಗಳು...

1. ಸರಿಯಾದ ರೀತಿಯಲ್ಲಿ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿ ಪಡಿಸುವುದು.

2. ಸರ್ಕಾರಿ ವಾಹನಗಳ ಸೌಲಭ್ಯಗಳನ್ನು ಒದಗಿಸುವದು.

3. ಪ್ರವಾಸಿಗರಿಗೆ ಉಚಿತ ವಸತಿ ಹಾಗೂ ಆಹಾರದ ವ್ಯವಸ್ಥೆ ಮಾಡುವರು.

4. ಪ್ರವಾಸಿಗರಿಗೆ ಸೂಕ್ತ ರಕ್ಷಣೆ ನೀಡುವರು.

5. ಪ್ರವಾಸದ ಸ್ಥಳದಲ್ಲಿ ಸ್ವಚ್ಛತೆ ಕಾಪಾಡುವರು.

6. ಐತಿಹಾಸಿಕ ಸ್ಥಳದ ಅಭಿವೃದ್ಧಿ ಮಾಡುವದು.

7. ಮಾಹಿತಿ ಕೇಂದ್ರಗಳನ್ನು ತೆರೆಯುವದು.

8. ವನ್ಯ ಜೀವಿಧಾಮಗಳನ್ನು ರಕ್ಷಿಸುವದು.

9. ವಿದ್ಯಾರ್ಥಿಗಳಲ್ಲಿ ಪ್ರವಾಸದ ಸ್ಥಳದ ಕುರಿತು ಅರಿವು ಮೂಡಿಸುವದು.

10. ಶಿಕ್ಷಣದಲ್ಲಿ ಕಡ್ಡಾಯವಾಗಿ ಕ್ಷೇತ್ರ ಅಧ್ಯನ ಮಾಡಿಸುವದು.

Scanned with Oken Scanner

# 5. ಆಧಾರ ಗ್ರಂಥಗಳು

1. ಕರ್ನಾಟಕ ಭೂಗೋಳ ಶಾಸ್ತ್ರ ಡಾ.ರಂಗನಾಥ
2. ಭಾರತದ ಭೂಗೋಳ ಶಾಸ್ತ್ರ – ಪಿ. ಮಲ್ಲಪ್ಪ
3. ಮಾಹಿತಿ ಸಂಶೋಧನಾ ಕೇಂದ್ರ ಧರ್ಮಸ್ಥಳ
4. ಮಾಹಿತಿ ಸಂಶೋಧನಾ ಕೇಂದ್ರಗಳು ಕರಾವಳೀ ತೀರದ ಪ್ರವಾಸೀ ಸ್ಥಳಗಳು

Scanned with Oken Scanner